**<u>ಸಾಕ್ಷಿಯನ್ನು ದಿಃ 24.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಲ್.ಡಿ.ಆರ್. ವಕೀಲರಿಂದಃ</u>**

ನಾನು ಸಾಫ್ಟವೇರ್ ಇಂಜಿನಿಯರ್ ಆಗಿದ್ದೆ. ನಾನು ಈಗ ಅಗ್ರಿಕಲ್ಚರ್ ಫ್ರಿ ಲ್ಯಾನ್ ಸಿಂಗ್ ಮಾಡುತ್ತಿದ್ದೇನೆ. ನಾನು ನಿಪಿ-2 ದಿಃ31.08.2013 ರ ಕ್ರಯದ ಕರಾರು ಪತ್ರವನ್ನು ನಿಪಿ-9 ರಶೀದಿಯಂತೆ ರದ್ದು ಪಡಿಸಿದ್ದೇನೆ ಎಂದರೆ ಸುಳ್ಳು. ನಿಪಿ-3 ರಶೀದಿಯ ಪ್ರಕಾರ ನಿಪಿ-1 ಮತ್ತು 2 ಕ್ರಯದ ಕರಾರು ಪತ್ರದ ಪ್ರಕಾರ ಕ್ರಯ ಪತ್ರವನ್ನು ಬರೆದುಕೊಡಲು ಸಾಧ್ಯವಿಲ್ಲ ಹಾಗಾಗಿ ರೂ.20 ಲಕ್ಷ ಹಣ ಹಾಗೂ 30 ಇಂಟು 40 ಅಡಿ ಸೈಟನ್ನು ನೀಡುವುದಾಗಿ ಆರೋಪಿ ನಿಪಿ-9 ರಂತೆ ಒಪ್ಪಿರುತ್ತಾರೆ. ಆರೋಪಿ ಕಚೇರಿಯಲ್ಲಿ ನಿಪಿ-9 ರಶೀದಿಯನ್ನು ಬರೆದುಕೊಟ್ಟಿರುತ್ತಾರೆ. ನಿಪಿ-9 ರಶೀದಿಯನ್ನು ಒತ್ತಾಯಪೂರ್ವಕವಾಗಿ

ಪೊಲೀಸ್ ಠಾಣೆಯಲ್ಲಿ ತೆಗೆದುಕೊಳ್ಳಲಾಗಿದೆ ಎಂದರೆ ಸುಳ್ಳು. ಅದೇ ದಿನ ಚೆಕ್ ಅನ್ನು ಪೊಲೀಸ್ ಠಾಣೆಯಲ್ಲಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಆರೋಪಿಯ ಕಚೇರಿಯಲ್ಲಿ ಚೆಕ್ ಅನ್ನು ಪಡೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಆ ಚೆಕ್ ಗೆ ಸಂಬಂಧಿಸಿದಂತೆ ಜೈಪುರ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ. ಸಾಕ್ಷಿಯು ಸ್ವತಃ ಆ ಪ್ರಕರಣದಲ್ಲಿ ಆರೋಪಿ ತಲೆಮರೆಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಆ ಚೆಕ್ ಬೌನ್ಸ್ ಪ್ರಕರಣ ಈಗಲೂ ಚಾಲ್ತಿಯಲ್ಲಿದೆ. ಆ ಕೇಸಿನಲ್ಲಿ ಆರೋಪಿ ಹಾಜರಾಗಿಲ್ಲ. ಆ ಚೆಕ್ ಬೌನ್ಸ್ ಪ್ರಕರಣದ ಸಿಸಿ ನಂ.6991/2015 ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣವನ್ನು ದಿಃ02.11.2015 ರಂದು ದಾಖಲಿಸಲಾಗಿದೆ ಎಂದರೆ ಸರಿ. ನಾನು ಉದ್ದೇಶಪೂರ್ವಕವಾಗಿ ಚೆಕ್ ಬೌನ್ಸ್ ಪ್ರಕರಣ ಇರುವ ಬಗ್ಗೆ ಹೇಳಿಲ್ಲ ಎಂದರೆ ಸುಳ್ಳು. ನಿಪಿ-9 ರಶೀದಿ ಜೆರಾಕ್ಸ್ ಪ್ರತಿಯಾಗಿದೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ರಶೀದಿಯ ದೃಡೀಕೃತ ಪ್ರತಿಯನ್ನು ಜೈಪುರ ನ್ಯಾಯಾಲಯದಿಂದ ಪಡೆದು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಿಪಿ-9 ರಶೀದಿ ಆಧಾರದಲ್ಲಿ ಎರಡು ಪ್ರಕರಣಗಳನ್ನು ನಡೆಸುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಯು ಸ್ವತಃ ಆ ಎರಡು ಬೇರೆ ವಿಧದ ಪ್ರಕರಣಗಳು ಎಂದು ಹೇಳುತ್ತಾರೆ. ಆ ರಶೀದಿಯ ದಿಃ27.06.2015 ಎಂದರೆ ಸರಿ.

ದಿನಾಂಕಃ27.06.2015 ರಲ್ಲಿ ನಿಪಿ-9 ರಶೀದಿ ಆಗಿದೆ ಎಂದರೆ ಸರಿ. ದಿಃ29.06.2015 ರಂದು ಆ ಸ್ಟಾಂಪ್ ಪೇಪರ್ ಅನ್ನು ಖರೀದಿಸಲಾಗಿದೆ ಎಂದರೆ ಸಾಕ್ಷಿ ರಶೀದಿ ಆದ ನಂತರ ಅದಕ್ಕೆ ಸ್ಟಾಂಪಿಂಗ್ ಮಾಡಲಾಗಿದೆ ಎಂದು ಹೇಳುತ್ತಾರೆ. ನಾನು ಮತ್ತು ಆರೋಪಿ ದಿಃ27.06.2015 ರಂದು ನಿಪಿ-9 ರಶೀದಿಗೆ ಸಹಿ ಮಾಡಿದ್ದೇನೆ. ನಿಪಿ-9 ರಶೀದಿಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ನಿಪಿ-2 ದಾಖಲೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸುಳ್ಳು.

ಮುಂದುವರೆದ ಪಾಟೀ ಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**